# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☏:0816 - 2255650,2273511 ಫ್ಯಾಕ್ಸ್:0816-2270719


ಸಂಖ್ಯೆ:ತು.ವಿ.ಪ.ವಿ.:2021-22/ 152 ದಿನಾಂಕ:09.07.2021

## ಅಧಿಸೂಚನೆ

**ವಿಷಯ** : ತುಮಕೂರು ವಿಶ್ವವಿದ್ಯಾನಿಲಯದಲ್ಲಿ **ಕ್ರೋಢೀಕೃತ ಅಂಕಪಟ್ಟಿ** (Consolidated Marks Card) ಯ ಸೇವೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ** : 1. ದಿನಾಂಕ:01.09.2017 ರಂದು ನಡೆದ ಮೂರನೇ ಸಾಮಾನ್ಯ ಸಿಂಡಿಕೇಟ್ ಸಭಾ ನಿರ್ಣಯ

2. ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ:25.06.2021 (ಕಂಡಿಕೆ-20)

*****

ತುಮಕೂರು ವಿಶ್ವವಿದ್ಯಾನಿಲಯದ ಘಟಕ, ಸಂಯೋಜಿತ ಕಾಲೇಜು ಹಾಗೂ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಸ್ನಾತಕ/ಸ್ನಾತಕೋತ್ತರ ಪದವಿ/ಡಿಪ್ಲೊಮ ವ್ಯಾಸಂಗ ಮಾಡಿರುವ ಪುನರಾವರ್ತಿತ ವಿದ್ಯಾರ್ಥಿಗಳಿಗೆ (Repeated Students) ಮುಂದಿನ ವಿದ್ಯಾಭ್ಯಾಸ/ಉದ್ಯೋಗ/ ಇತರೆ ಉದ್ದೇಶಕ್ಕೆ ಕ್ರೋಢೀಕೃತ ಅಂಕಪಟ್ಟಿ (Consolidated Marks Card) ಯ ಸೇವೆಯ ಅವಶ್ಯಕತೆಯನ್ನು ಉಲ್ಲೇಖ (1) ರ ಸಿಂಡಿಕೇಟ್ ಸಭೆಯು ಮನಗಂಡು, ಸದರಿ ಸೇವೆಯನ್ನು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಗೊಳಿಸಲು ಸೂಚಿಸಿರುತ್ತದೆ. ತತ್ಸಂಬಂಧ ಸದರಿ ಸೇವೆಯನ್ನು ವಿಶ್ವವಿದ್ಯಾನಿಲಯದಲ್ಲಿ ಉಲ್ಲೇಖ (2) ರ ಮಾನ್ಯ ಕುಲಪತಿಯವರ ಅನುಮೋದನೆಯ ಮೇರೆಗೆ ಅನುಷ್ಠಾನಗೊಳಿಸಲಾಗಿರುತ್ತದೆ.

ಈ ಸೇವೆಗಾಗಿ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ವಿವಿಧ ಸೇವೆಗಳನ್ನು ಪಡೆಯಲು ಬಳಸಲಾಗುತ್ತಿರುವ ಅರ್ಜಿಯ ಜೊತೆಗೆ ಸದರಿ ಸೆಮಿಸ್ಟರ್‌ಗೆ ಸಂಬಂಧಿಸಿದ ಎಲ್ಲಾ ಮೂಲ ಅಂಕಪಟ್ಟಿಗಳು ಹಾಗೂ ನಿಗದಿತ ಶುಲ್ಕವನ್ನು ಪಾವತಿಸಿರುವುದಕ್ಕೆ ಸಂಬಂಧಿಸಿದ ಚಲನ್‌ನ್ನು ಲಗತ್ತಿಸಿ, ಕಾಲೇಜು/ವಿಭಾಗದ ಪ್ರಾಂಶುಪಾಲರು/ಮುಖ್ಯಸ್ಥರ ಶಿಫಾರಸ್ಸಿನೊಂದಿಗೆ ಆಸಕ್ತ ವಿದ್ಯಾರ್ಥಿಗಳು ಅರ್ಜಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿದಲ್ಲಿ, ಕ್ರೋಢೀಕೃತ ಅಂಕಪಟ್ಟಿಯನ್ನು (Consolidated Marks Card) ಸಂಬಂಧಪಟ್ಟ ಕಾಲೇಜು/ವಿಭಾಗದ ಮುಖಾಂತರ ವಿತರಿಸಲಾಗುವುದು. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಕಾಲೇಜು/ವಿಭಾಗಗಳ ಪ್ರಾಂಶುಪಾಲರು/ಮುಖ್ಯಸ್ಥರುಗಳು ಸದರಿ ಸೇವೆಯ ಬಗ್ಗೆ ತಮ್ಮ ಕಾಲೇಜು/ವಿಭಾಗಗಳಲ್ಲಿನ ವಿದ್ಯಾರ್ಥಿಗಳ ಗಮನಕ್ಕೆ ತಂದು ಈ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

**ಶುಲ್ಕದ ವಿವರ** : ಪ್ರತಿ ಸೆಮಿಸ್ಟರ್‌ಗೆ ರೂ. 900-00/- (ಒಂಭತ್ತು ನೂರು ರೂಪಾಯಿಗಳು ಮಾತ್ರ)

[ಅರ್ಜಿ ಶುಲ್ಕ ಹೊರತುಪಡಿಸಿ]

ಕುಲಸಚಿವರು(ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಪ್ರಾಂಶುಪಾಲರು; ಘಟಕ/ಎಲ್ಲಾ ಸಂಯೋಜಿತ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಮುಖ್ಯಸ್ಥರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಪ್ರತಿಗಳು :

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಎಲ್ಲಾ ವಿಭಾಗಗಳ ಉಪಕುಲಸಚಿವರುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಶ್ರೀ ರಾಜೇಶ್ ಶೆಣೈ, ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
6. ಗಣಕಯಂತ್ರ ವಿಭಾಗ, ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
7. ಕಚೇರಿ ಪ್ರತಿ